ದಿನಾಂಕ: 09-06-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಸಿ.ಎಸ್.ಎಸ್. ವಕೀಲರಿಂದ**

ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿಯ ತಂದೆ ಅಣ್ಣಯ್ಯ ದಿಃ30.06.2009 ತೀರಿಕೊಂಡಿರುತ್ತಾರೆಂದು ಬರೆಸಿರುತ್ತೀರಾ ಎಂದರೆ ಸರಿ. ಸದರಿ ಅಣ್ಣಯ್ಯ ದಿಃ30.06.2009 ರಂದು ಮೃತಪಟ್ಟಿರುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ನನ್ನ ವಕೀಲರು ಕೊಟ್ಟಿದ್ದಾರೋ, ಇಲ್ಲವೋ ಗೊತ್ತಿಲ್ಲ ಎಂದು ಹೇಳುತ್ತಾರೆ.

ಪ್ರತಿವಾದಿಗೆ ಕಳುಹಿಸಿದ ವಾದ ಪತ್ರದ ನಕಲು ಪ್ರತಿಯಲ್ಲಿ ಅಣ್ಣಯ್ಯ ತೀರಿಕೊಂಡ ದಿನಾಂಕವನ್ನು ಖಾಲಿ ಬಿಟ್ಟು ಕಳುಹಿಸಿದ್ದೀರಿ ಎಂದರೆ ಸರಿ. ಸಾಕ್ಷಿಗೆ ವಾದ ಪತ್ರದ ನಕಲು ಪ್ರತಿಯನ್ನು ತೋರಿಸಿ, ಅದರಲ್ಲಿ ಜಾಗ ಖಾಲಿ ಇದೆ ಎಂದು ಸಾಕ್ಷಿ ಒಪ್ಪಿದ ಮೇರೆಗೆ ಸದರಿ ವಾದ ಪತ್ರದ ನಕಲು ಪ್ರತಿಯನ್ನು **ನಿಡಿ-1** ಎಂದು ಗುರುತಿಸಲಾಯಿತು.

ಮೈಸೂರಿನ ಮಂಡಿಮೊಹಲ್ಲಾದ, ಪಟ್ಟೆಗಾರ ಬೀದಿಯ, ಮನೆ ನಂ.1177 ರಲ್ಲಿ ವಾಸವಿರುವ ಲೇಟ್ ಪಿ. ಮಹದೇವು ರವರ ಮಗ ಎಂ. ಮಂಜುನಾಥ ಎಂದರೆ ಯಾರು ಎಂದರೆ ಸಾಕ್ಷಿ ನನ್ನ ಸಂಬಂಧಿ  ಎಂದು ಹೇಳುತ್ತಾರೆ. ಸದರಿ ಮಂಜುನಾಥ ನನ್ನ ಸೋದರ ಅತ್ತೆಯ ಮಗ. ಅಣ್ಣಯ್ಯ ನನ್ನ ದೊಡ್ಡಪ್ಪನ ಮಗ. ಮಂಜುನಾಥ ನನ್ನ ತಂದೆಯ ಮನೆ ಕಡೆಯವನಾಗಿದ್ದು, ಅವನು ನನಗೆ ಸರಿಯಾಗಿ ಯಾವ ರೀತಿಯ ಸಂಬಂಧಿ  ಎಂದು ಗೊತ್ತಿಲ್ಲ. ನಿಮ್ಮ ತಂದೆ ಹಾಗೂ ಪ್ರತಿವಾದಿಯ ತಂದೆ ಅಣ್ಣ ತಮ್ಮಂದಿರು ಎಂದರೆ ಸರಿ.

ನೀವು ನಿಮ್ಮ ಪಾಟೀಸವಾಲಿನಲ್ಲಿ ಈ ಹಿಂದೆ ಅಣ್ಣಯ್ಯ ರವರ ಮರಣ ಪ್ರಮಾಣ ಪತ್ರದ ಮೂಲ ಪ್ರತಿ ಮನೆಯಲ್ಲಿದೆ ಎಂದು ಹೇಳಿದ್ದು, ಅದನ್ನು ಇಲ್ಲಿಯವರೆಗೆ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ.

ಸಾಕ್ಷಿಗೆ ಅಣ್ಣಯ್ಯ ರವರ ಮರಣ ಪ್ರಮಾಣ ಪತ್ರವನ್ನು ತೋರಿಸಿದ್ದು, ಅದನ್ನು ಸಾಕ್ಷಿ ನೋಡಿ ಒಪ್ಪಿದ ಮೇರೆಗೆ ಅದನ್ನು **ನಿಡಿ-2** ಎಂದು ಗುರುತಿಸಲಾಯಿತು. ನೀವು ಅಣ್ಣಯ್ಯನ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ, ಅಣ್ಣಯ್ಯನ ಮರಣದ ದಿನಾಂಕವನ್ನು ದಿಃ30.06.2009 ಎಂದು ಸುಳ್ಳಾಗಿ ವಾದ ಪತ್ರದಲ್ಲಿ ನಮೂದಿಸಿದ್ದೀರಿ ಎಂದರೆ  ಸರಿಯಲ್ಲ.

ನಿಪಿ-1 ರಂತೆ ಮರಣ ಶಾಸನವನ್ನು ತಾಲ್ಲೂಕು ಕಚೇರಿಯ ಬಳಿ ಬೆಳಿಗ್ಗೆ 11.00 ಗಂಟೆಗೆ ಬರೆಯಲಾಯಿತು. ನಿಪಿ-1 ನ್ನು ವೆಂಕಟೇಶ ವಕೀಲರು ಬರೆದಿರುತ್ತಾರೆ. ನಿಪಿ-1 ನ್ನು ಬರೆಯಲು ಮಾಹಿತಿಯನ್ನು ಅಣ್ಣಯ್ಯ ರವರು ನೀಡಿರುತ್ತಾರೆ. ನಿಪಿ-1 ನ್ನು ಬರೆಯುವ ಕಾಲಕ್ಕೆ ಮಹಾದೇವು, ಸೋಮಣ್ಣ, ಅಣ್ಣಯ್ಯ, ರಾಮಮ್ಮ ಇದ್ದರು  ಎಂದು ಹೇಳುತ್ತಾರೆ. ನಿಪಿ-1 ನ್ನು ಎರಡು ಗಂಟೆಗಳ ಕಾಲ ಬರವಣಿಗೆ ಮಾಡಲಾಯಿತು. ನಿಪಿ-1

ನ್ನು ಬರೆದಾದ ನಂತರ ನಾನು ತಾಲ್ಲೂಕು ಕಚೇರಿಯ ಹತ್ತಿರ ಹೋಗಿರುತ್ತೇನೆ. ನನ್ನನ್ನು ತಾಲ್ಲೂಕು ಕಚೇರಿಯ ಬಳಿ ನನ್ನ ತಂದೆ ಬರಲು ಹೇಳಿದರು. ನನ್ನ ತಂದೆ ಹಾಗೂ ದೊಡ್ಡಪ್ಪ ಮುಂಚಿತವಾಗಿ ಬಂದಿದ್ದರು. ನಿಪಿ-1 ನ್ನು ತಾಲ್ಲೂಕು ಕಚೇರಿಯ ಹತ್ತಿರ ಬರೆಸಿದ್ದು, ನಂತರ ನಾನು ತಾಲ್ಲೂಕು ಕಚೇರಿಯ ಒಳಗೆ ಹೋಗಿ ಸಹಿ ಹಾಕಿರುತ್ತೇನೆ. ನಾನು ಸಹಿ ಹಾಕುವ ಮೊದಲೇ ಸೋಮಣ್ಣ, ಮಹಾದೇವು ಹಾಗೂ ನನ್ನ ದೊಡ್ಡಪ್ಪ ಸಹಿ ಹಾಕಿರುತ್ತಾರೆ. ನಿಪಿ-1 ನ್ನು ಪತ್ರ ಬರಹಗಾರರು ಬರವಣಿಗೆ ಮಾಡಿ ಸಹಿ ಹಾಕಿದ ನಂತರ ನಾನು ಸಹಿ ಹಾಕಿರುತ್ತೇನೆ. ನಿಪಿ-1 ನ್ನು ನನ್ನ ಕೈಗೆ ಕೊಟ್ಟಿಲ್ಲ. ನಿಪಿ-1 ರ ಎಲ್ಲ ಪುಟಗಳಿಗೂ ನಾನು ಸಹಿ ಹಾಕಿರುತ್ತೇನೆ. ನಿಪಿ-1 ಕ್ಕೆ ನನ್ನ ದೊಡ್ಡಮ್ಮ ರಾಮಮ್ಮ ಸಹ ಸಹಿ ಹಾಕಿದ್ದರು. ನಿಪಿ-1 ದಾಖಲೆಯಲ್ಲಿ ನನ್ನ ಸಹಿ ಇದೆ. ರಾಮಮ್ಮ ತಮ್ಮ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿದಾರರು ಎಂಬ ಬರವಣಿಗೆ ಇರುವ ಮೇಲೆ ಹಾಕಿರುತ್ತಾರೆಂದರೆ ಸರಿ. ಅಣ್ಣಯ್ಯನ ಸಹಿ ಮರಣ ಶಾಸನವನ್ನು ಬರೆದು ಕೊಡುವವರ ಸಹಿ ಎಂದು ನಮೂದು ಇರುವ ಬರವಣಿಗೆ ಕೆಳಗೆ ಇದೆ ಎಂದರೆ ಸರಿ. ನಿಪಿ-1 ರಲ್ಲಿರುವ ಹೆಬ್ಬೆಟ್ಟಿನ ಗುರುತು ಅಣ್ಣಯ್ಯಂದೇ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಕೊಟ್ಟಿಲ್ಲ ಎಂದರೆ ಸರಿ.

ಅಣ್ಣಯ್ಯರವರ ತಂದೆಯನ್ನು ಮರಿಕುಂತಯ್ಯ @ ಮರಿಯಪ್ಪ @ ಮರೀಗೌಡ ಎಂದು ಬರೆಸಿದ್ದು, ಅದನ್ನು ಪುಷ್ಟೀಕರಿಸಲು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಅಣ್ಣಯ್ಯನನ್ನು ಅಣ್ಣೇಗೌಡ ಎಂದು ಸಹ ಕರೆಯಲಾಗುತ್ತಿತ್ತು ಎಂದು ತೋರಿಸಲು ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ. ಪಿರಿಯಾಪಟ್ಟಣ ತಾಲ್ಲೂಕು ಕಚೇರಿಗೆ ಅಣ್ಣಯ್ಯ ಮೃತಪಟ್ಟ ಬಗ್ಗೆ ಮಾಹಿತಿ ಕೊಟ್ಟವರು ಯಾರು ಎಂದರೆ ಸಾಕ್ಷಿ ಮೈಸೂರು ತೀರಿಕೊಂಡ ವಿಚಾರವನ್ನು ಪಿರಿಯಾಪಟ್ಟಣ ಪೊಲೀಸ್ ಠಾಣೆಗೆ ತಿಳಿಸಿದೇವು ಎಂದು ಹೇಳುತ್ತಾರೆ.

ನೀವು ಹಾಗೂ ನಿಮ್ಮ ತಂದೆ ಸೇರಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ಮೈಸೂರಿನ ಸಿವಿಲ್ ನ್ಯಾಯಾಲಯದಲ್ಲಿ ಸಿ.ಮಿಸ್ ನಂ.640/2013 ರಂತೆ ದಿಃ21.11.2013 ರಂದು ಮಾಡಿದ ಆದೇಶವನ್ನು ನಿವೇನು ಪ್ರಶ್ನೆ ಮಾಡಿಲ್ಲ ಎಂದರೆ

ಸಾಕ್ಷಿ ಮಾಡಿಲ್ಲ ಎಂದು ಹೇಳುತ್ತಾರೆ. ಪ್ರತಿವಾದಿಯ ಮಕ್ಕಳು ನಿಮಗಿಂತ ಚಿಕ್ಕವರು ಎಂದರೆ ಸಾಕ್ಷಿ ದೊಡ್ಡವರು ಎಂದು ಹೇಳುತ್ತಾರೆ. ಪ್ರತಿವಾದಿಯೇ ಅವರ ತಂದೆ ಜೀವಂತ ಇದ್ದಾಗ ಅವರ ಶುಶ್ರುಕೆ ಮಾಡಿದ್ದು, ಅವರು ಕಾಲವಾದ ನಂತರ ಅವರ ತಿಥಿ ಕಾರ್ಯವನ್ನೆಲ್ಲ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಇಂದಿಗೂ ಸಹ ದಾವಾ ಆಸ್ತಿ ಪ್ರತಿವಾದಿಯ ಸ್ವಾಧೀನಾನುಭವದಲ್ಲಿದೆ ಎಂದರೆ ಸರಿಯಲ್ಲ.

ನನ್ನ ತಂದೆ ಮಟನ್ ವ್ಯಾಪಾರ ಮಾಡುತ್ತಾರೆ. ನೀವು ಹಣಕಾಸಿನಲ್ಲಿ ಸದೃಢರಾಗಿದ್ದೀರಿ ಎಂದರೆ ಸಾಕ್ಷಿ ಸುಮಾರಾಗಿದ್ದೇವೆ ಎಂದು ಹೇಳುತ್ತಾರೆ. ಪ್ರತಿವಾದಿಗಳಿಗೆ ಬೆದರಿಕೆ ಮಾಡಿ ದಾವಾ ಆಸ್ತಿಯನ್ನು ಲಪಟಾಯಿಸಲು ಪ್ರಯತ್ನಿಸಿದ್ದೀರಿ, ಪ್ರತಿವಾದಿಗಳು ಒಪ್ಪಲಿಲ್ಲ ಎಂದರೆ ಸರಿಯಲ್ಲ. ನಿಪಿ-1 ನ್ನು ಸೃಷ್ಟಿ ಮಾಡಿ, ಮೃತ ಅಣ್ಣಯ್ಯ ಸುಳ್ಳು ಮರಣ ಶಾಸವನ್ನು ಬರೆದಿರುತ್ತಾರೆಂದು ಸುಳ್ಳು ದಾವೆ ಹೂಡಿರುತ್ತೀರಿ ಎಂದರೆ ಸರಿಯಲ್ಲ. ನಿಮಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು, ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.